# ಹೈ. ಕ. ಶಿಕ್ಷಣ ಸಂಸ್ಥೆಯ
# ಶ್ರೀಮತಿ ಸಿ.ಬಿ. ಪಾಟೀಲ ಕಲಾ ಮತ್ತು ವಾಣಿಜ್ಯ
# ಪದವಿ ಮಹಾವಿದ್ಯಾಲಯ ಚಿಂಚೋಳಿ

# DEPARTMENT OF KANNADA



# DEPARTMENT OF KANNADA


## ಡಾ. ಸಿದ್ದಣ್ಣ ಎಮ್. ಕೊಳ್ಳಿ

ಸಹಾಯಕ ಪ್ರಾಧ್ಯಾಪಕರು

ಕನ್ನಡ ವಿಭಾಗ

# ನಡುಗನ್ನಡ ಸಾಹಿತ್ಯದ ರೂಪಗಳು

- ರಗಳೆ
- ಷಟ್ಪದಿ
- ಕೀರ್ತನೆ
- ಸಾಂಗತ್ಯ
- ತ್ರಿಪದಿ

# ಪೀಠಿಕೆ

ನಡುಗನ್ನಡ ಸಾಹಿತ್ಯ ಹನ್ನೆರಡನೆ ಶತಮಾನದಲ್ಲಿ ಪ್ರಾರಂಭವಾಗಿ ತನ್ನ ಹರವು ಬಿತ್ತರಗೊಳ್ಳುತ್ತಾ ಮುಂದೆ ಸಾಗಿತು. ಹಳೆ ರೂಪಗಳನ್ನು ಕಳಚಿಕೊಂಡು ಹೊಸ ರೂಪಗಳನ್ನು ತೊಟ್ಟಿಕೊಂಡು ಅಂದರೆ ರಗಳೆ. ಷಟ್ಪದಿ, ವಚನ, ತ್ರಿಪದಿ, ಸಾಂಗತ್ಯ, ಕಿರ್ತನೆ, ಮುಂತಾದವುಗಳು ದೆಸಿ ಛಂದಸ್ಸು ಹುಟ್ಟಿಕೊಂಡವು.

# ರಗಳೆಯ ಅರ್ಥ :

ರಗಳೆ ಎಂಬ ಹೆಸರು ಸಂಸ್ಕೃತದ ರಘಟಾ ಎಂಬ ರೂಪದಿಂದ ಬಂದಿದೆ ನಾಗವರ್ಮನ ಛಂದೋಂಬುದಿಯಲ್ಲಿ ಮೊದಲ ಬಾರಿಗೆ ರಗಳೆಗೆ ರಘಟಾ ಎಂಬ ಪದ ಬಳಸಿದ್ದಾರೆ.ರಗಳೆ ಶಬ್ಬಕ್ಕೆ ಸಾಮಾನ್ಯವಾಗಿ ಕೊನೆಯಿಲ್ಲದ ಮಾತು ,ತಲೆ ಹರಟೆ,ಒಂದು ಕ್ರಮಬದ್ದತೆ ಇಲ್ಲದ ಕೆಲಸ, ಕಲಬೆರಕೆ ಇತ್ಯಾದಿ ಅರ್ಥಗಳು ರೂಢಿಗೆ ಬಂದಿದೆ.

ರಗಳೆಯು ಮಾತ್ರಾಗಣವನ್ನು ಆಶ್ರಯಿಸಿರುವುದು ಕವಿರಾಜಮಾರ್ಗದಲ್ಲಿ ಪೂರ್ವದ ಶಾಸನಗಳಲ್ಲಿ ರಗಳೆಯ ಸುಳಿವು ಸಿಗುವದಿಲ್ಲ. ರಗಳೆ ದೊರೆಯುವ ಪ್ರಪ್ರಥಮ ಕಾವ್ಯವೆಂದರೆ ಆದಿಪುರಾಣ ಹಿಗಾಗಿ ಕವಿರಾಜಮಾರ್ಗದ ಹಾಗು ಆದಿಪುರಾಣದ ನಡುವಣ ಕಾಲದಲ್ಲಿ ರಗಳೆ ರೂಪಗೊಂಡಿದೆ.

# ರಗಳೆಯ ಸಾಮಾನ್ಯ ಲಕ್ಷಣಗಳು :

- ರಗಳೆಯ ಚರಣದಲ್ಲಿ ಮಾತ್ರೆಗಳು ಗಣನಿಯಮ ವಿಪರ್ಯಾಸದೊಡನೆ ಬರುತ್ತವೆ.
- ಪ್ರತಿ ಚರಣದಲ್ಲಿ ಮಾತ್ರೆ ಸಮನಾಗಿರುತ್ತವೆ.
- ರಗಳೆಯು ಲಯದಲ್ಲಿ ತಾಳದ ಗಣಕ್ಕೆ ಒಳಪಡುತ್ತದೆ.
- ರಗಳೆಯು ಸುಶ್ರಾವ್ಯವಾದುದು.
- ಸ್ವಚ್ಛಂದವಾಗಿರುವದೇ ರಗಳೆಯ ವಿಶೇಷತೆ.
- ರಗಳೆಯಲ್ಲಿ ಆದಿಪ್ರಾಸಕ್ಕಿಂತ ಅಂತ್ಯಪ್ರಾಸವೇ ಹೆಚ್ಚು ಮುಖ್ಯ
- ರಗಳೆಗೆ ಇಂತಿಷ್ಟೆ ಪಾದಗಳೆಂಬ ನಿರ್ಭಂದವಿಲ್ಲ.

# ರಗಳೆಯ ಪ್ರಕಾರಗಳು :

ಕನ್ನಡ ಕಾವ್ಯಗಳಲ್ಲಿ ಪ್ರಯೋಗವಾಗುತ್ತ ಬಂದ ಮುಖ್ಯ ರಗಳೆಗಳು ಈ ಕೆಳಗಿನಂತಿವೆ.

1 ಉತ್ಸಾಹ ರಗಳೆ

2 ಮಂದಾನಿಲ ರಗಳೆ

3 ಲಲಿತ ರಗಳೆ

# 1. ಉತ್ಸಾಹ ರಗಳೆ :

ಉತ್ಸಾಹ ರಗಳೆಯ ಮೊದಲನೆ ಬಗೆಯಲ್ಲಿ ಮೂರು ಮಾತ್ರೆಯ ನಾಲ್ಕು ಗಣಗಳಿರುತ್ತವೆ. ಇಲ್ಲಿ ಅಂತ್ಯಪ್ರಾಸ ಕಡ್ಡಾಯವಗಿರುತ್ತವೆ. ಇದು ಉತ್ಸಾಹ, ಸಂಭ್ರಮದ,ಭಾವನೆಗಳನ್ನು ಹೇಳುವ ಕಾವ್ಯಗಳಲ್ಲಿ ಬರುತ್ತದೆ.

ಉದಾ: - ᴗ - ᴗ - ᴗ - ᴗ

ತುಂಬಿ । ವಿಂಡಿ । ನಂತೆ ।ಪಾಡಿ। 3*4=12

- ᴗ - ᴗ - ᴗ - ᴗ

ಜಕ್ಕ । ವಕ್ಕಿ । ಯಂತೆ । ಕೂಡಿ। 3*4=12

ಉತ್ಸಾಹ ರಗಳೆಯ ಎರಡನೆಯ ಬಗೆಯಲ್ಲಿ ಮೂರು ಮಾತ್ರೆಯ ಮೂರು ಗಣಗಳು ಬಂದು ಮೇಲೊಂದು ಗುರು ಬರುತ್ತದೆ.

ಉದಾ: - ᴗ ᴗ ᴗ ᴗ - ᴗ -

ಮಾವಿ । ನಡಿಯೊ ।ಳಾಡು ।ತಂ।

- ᴗ - ᴗ - ᴗ -

ಪಾಡ ।ನೆಯ್ದು ।ಕೇಳು। ತಂ ।

# 2. ಮಂದಾನಿಲ ರಗಳೆ :

ಈ ರಗಳೆಯು ಎರಡು ಬಗೆಯಲ್ಲಿ ಬರುತ್ತದೆ. ಮೊದಲ ಬಗೆಯಲ್ಲಿ ನಾಲ್ಕು ಮಾತ್ರೆಯ ನಾಲ್ಕು ಗಣಗಳು ಒಟ್ಟು ಹದಿನಾರು ಮಾತ್ರೆಗಳು ಇರುತ್ತವೆ. ಅಂತ್ಯಪ್ರಾಸವು ಬರುವುದುಂಟು.

| | | | | | |
|---|---|---|---|---|---|
| ಉದಾ: | – ∪∪ | – – | ∪∪ ∪∪ | – – | |
| | ಆಡುವ | ಗುಂಡ | ಯ್ಯನ ಹೊಸ | ನೃತ್ಯಂ | 4*4=16 |
| | – ∪∪ | ∪∪– | – ∪∪ | – – | |
| | ಕೇಳುವ | ಶಿವನಂ | ಮುಟ್ಟಿತು | ಸತ್ಯಂ | 4*4=16 |

ಮಂದಾನಿಲ ರಗಳೆಯ ಮತ್ತೊಂದು ವಿಧ. ಮೂರು ಐದು,ಮೂರು ಐದು ಮಾತ್ರೆಗಳ ನಾಲ್ಕು ಗಣಗಳು ಒಟ್ಟು ಹದಿನಾರು ಮಾತ್ರೆಗಳು ಇರುತ್ತವೆ.

| | | | | | |
|---|---|---|---|---|---|
| ಉದಾ: | ∪∪∪ | ∪– – | ∪ ∪ ∪ | ∪– – | |
| | ಇರಿದೆ | ಯಲಾ ಎ | ನ್ನ ನುಸು | ಕುಮಾರಾ | 3*5=15 |
| | ∪∪∪ | ∪– ∪ ∪ | ∪∪∪ | ∪– – | |
| | ಕೊರೆದೆ | ಯಲಾ ಕೊರ | ಳನುಜಿ | ತಮಾರಾ | 3*5=15 |

ಮಂದಾನಿಲ ರಗಳೆಯು ಮಂದಗಾಳಿ ಬೀಸಿದಂತೆ ಮನೋಹರವಾದ ಶೈಲಿ ಹೊಂದಿರುತ್ತದೆ.

# 3. ಲಲಿತ ರಗಳೆ :

ಈ ರಗಳೆಯಲ್ಲಿ ಐದು ಮಾತ್ರೆಯ ನಾಲ್ಕು ಗಣಗಳು ಬರುತ್ತವೆ. ಅಂತ್ಯ ಪ್ರಾಸದ ನಿಯಮವು ಎರಡೆರಡು ಸಾಲುಗಳಿಗೆ ಇರಬಹುದು.

ಉದಾ: – ∪∪∪   – –∪   – ∪∪∪   – ∪∪∪

ಚಂಗಣಗಿ   ಲೇ ಬಾರ   ಲಿಂಗದೊಲ   ವೇ ಎನುತೆ   5*4=20

– ∪∪∪   – ∪∪∪   – ∪∪∪   – ∪∪∪

ಸಿಂಗರಿಸು   ವೆಂ ಪರಮ   ನಂಘ್ರಿಗಳ   ನೆಂದೆನುತೆ   5*4=20

ಲಲಿತ ರಗಳೆಯು ಪ್ರಸಿದ್ಧ ರಗಳೆಯಾಗಿದೆ. ದೀರ್ಘವಾದ ಕಾವ್ಯ ರಚಿಸುವಲ್ಲಿ ಬಳಕೆಯಗಿದೆ. ಇದರ ಶೈಲಿಯು ಲತೆಯ ಹಾಗೆ ಬರುತ್ತದೆ.

# ಉಪಸಂಹಾರ

ಈ ಮೂರು ರಗಳೆಗಳನ್ನು ಕುರಿತು ಲಲಿತವು ಲಾಲಿತ್ಯವಾಗಿಯೂ ಮಂದಾನಿಲ ಮಂದವಾಗಿಯೂ ,ಉತ್ಸಾಹ ಸುಕೋಮಲವಾಗಿಯೂ ಇರುವುದುಂಟು ಎಂದು ಡಾ. ಡಿ.ಎಸ್ ಕರ್ಕಿಯವರು ಅಭಿಪ್ರಾಯಪಟ್ಟಿದ್ದಾರೆ. ಹರಿಹರನಿಂದ ಶ್ರೇಷ್ಠತೆಯನ್ನು ಪಡೆದುಕೊಂಡ ಈ ರಗಳೆಯು ಅವನಿಗೆ ರಗಳೆಯ ಕವಿ ಎಂದೇ ಹೆಸರನ್ನು ತಂದುಕೊಟ್ಟಿದೆ. ಮುಂದಿನ ಹಲವು ಕವಿಗಳ ಮೂಲಕ ನಿಧಾನವಾಗಿ ಬೆಳೆದು ಬಂದು ಹೊಸಗನ್ನಡದಲ್ಲಿ ಮರುಹುಟ್ಟನ್ನು ಪಡೆದುಕೊಂಡಿದೆ. ಹಳಗನ್ನಡದಿಂದ ನಡುಗನ್ನಡ ಕವಿಗಳು ತಮ್ಮ ಕಾವ್ಯಗಳಲ್ಲಿ ಪೂರ್ಣಪ್ರಮಾಣವಾಗಿ ರಗಳೆಯನ್ನೆ ಬಳಸಿಕೊಂಡಿದ್ದಾರೆ ಉದಾ: ಕೆರೆಯ ಪದ್ಮರಸ (ದೀಕ್ಷಾಬೋಧೆ), ಸಿದ್ದಲಿಂಗೇಶ್ವರ(ಜಂಗಮ ರಗಳೆ), ತ್ರಿಭುವನತಾತ (ಅಮ್ಮವ್ವೆಯ ರಗಳೆ), ಪಾಲ್ಕುರಿಕೆ ಸೋಮನಾಥ (ಸದ್ಗುರು ರಗಳೆ), ಭೀಮಕವಿ(ಷಡಕ್ಷರಿ ರಗಳೆ) ಮುಂತಾದವುಗಳು. ಆಧುನಿಕ ಮಹಾಕಾವ್ಯಗಳು ಸರಳ ರಗಳೆಯಲ್ಲಿ ಮೂಡಿಬಂದಿವೆ. ಹರಿಹರನ ಕಾಲಕ್ಕಿದ್ದ ಪ್ರಾಸದ ನಿಯಮಗಳು ಸಡಿಲಾಗಿವೆ. ಪರಮೇಶ್ವರ ಭಟ್ಟ ,ಕುವೆಂಪು, ಪು.ತಿ.ನ ಮೊದಲಾದವರು ಸರಳ ರಗಳೆಯಲ್ಲಿ ಗೀತ ನಾಟಕಗಳನ್ನು ರಚಿಸಿದ್ದಾರೆ.

# ಧನ್ಯವಾದಗಳು